ಇಷ್ಟಕ್ಕೂ, ಸಾವಿನ ಹೊತ್ತಿನಲ್ಲಿ ಈ ಪರಿಯ ವ್ಯವಹಾರ ಚೆನ್ನೇ? ಯಾರಿಗೂ ಸೂತಕವನ್ನು ಮನಸೋಇಚ್ಛೆ ಆಚರಿಸುವಷ್ಟು ಆಸ್ಪದವಿರಬೇಕಲ್ಲವೆ? ಮುಂದೆ ಹೊರಟ ಮೃತಳ ಸಲುವಾಗಿ ಹಿಂದೆ ಉಳಿದ ಪ್ರೀತ್ಯರ್ಥರು ಸಲ್ಲಿಸಬಹುದಾದ ಕಿಂಚಿತ್ತೆಂದರೆ ಇದು ತಾನೇ... ಎಂದೆಲ್ಲ ಸಮಜಾಯಿಷಿ ಆಡಬೇಕೆನಿಸಿತು. ಆದರೆ, ಹಿಮಾದ್ರಿ ಸತ್ಪತಿಗೇ ನೇರ ತಿಳಿಸಬೇಕಾದ ಸಾಂತ್ವನವನ್ನು ಅವನ ಸೆಕ್ರೆಟರಿಗೇನು ಹೇಳುವುದೆಂದು ಸುಮ್ಮನಾದೆ.

'ನೋ, ಸರ್... ಸತ್ಪತಿ ಸರ್ ನಿಮ್ಮನ್ನು ನೋಡದೆಯೇ ವಾಪಸು ಕಳಿಸಲಾರಾರು... ಎಂಟೂವರೆಗೆ ಇಲ್ಲೇ ಹೊಟೆಲಿಗೇ ಬರುತೀನಿ ಅಂತಂದರು... ಅಷ್ಟು ಹೊತ್ತಿಗೆ ರೆಡಿ ಇರುತೀರಲ್ಲವಾ? ಲೆಟ್ಸ್ ಮೀಟ್ ಎಟ್ ದಿ ಲಾಬಿ...'

'ಸುಮ್ಮನೆ ಯಾಕೆ ತೊಂದರೆ, ಕುಣಾಲ್? ರಾತ್ರಿ ಬೇರೆ ತಡವಾಗಿರುತ್ತೆ... ವಿಶ್ರಾಂತಿ ತಕ್ಕೊಳ್ಳದಲ್ಲವಾ?' ಎಂದು ಉಪಚಾರದ ಮಾತಿಗಿಳಿದವನು, 'ಇಟ್ಸ್ ಫೈನ್ ಇಟ್ಸ್ ಫೈನ್... ನಾನು ಎಂಟೂವರೆಗೆ ರೆಡಿ ಇರುತೀನಿ...' ಎಂದು ಹೇಳಿ ಮಾತು ಕಡಿದೆ.

ಮನಸ್ಸಿನಲ್ಲಿ ನೂರಾರು ಮಾತುಗಳು ಆಡದೆಯೇ ಹಿಮ್ಮಿಕ್ಕವು. ಮಾತುಗಳಲ್ಲದೆ ಆಡಲೊಲ್ಲದ ದುಃಖವೂ ಒಡನೊಡನೆ ಮಿಕ್ಕು ಕೆಣಕಿತು.

## 1

ಹೋಮ್‌ಸೆಕ್ರೆಟರಿಯ ಫೋನು ಬರದಿದ್ದ ಪಕ್ಷಕ್ಕೆ ನಾನು ನಿಜಕ್ಕೂ ಈ ಅಂತ್ಯೇಷ್ಟಿಯಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಈ ಸಂಸ್ಕಾರವನ್ನು ಇಷ್ಟೆಲ್ಲ ಆಸ್ಥೆಯಿಟ್ಟು ಕೈಗೊಳ್ಳುತ್ತಿರಲಿಲ್ಲ. ವಿಷಯವಿಷ್ಟೆ: ಕಳೆದ ಹದಿನೈದು ದಿವಸಗಳಲ್ಲಿ ಒಂದರ ಹಿಂದೊಂದೆನ್ನುವ ಹಾಗೆ ಆರು ಸಾವುಗಳ ವಿಧಿವಿಧಾನಗಳನ್ನು ನಿರ್ವಹಿಸಿ ನನಗೆ ಸಾಕೆನಿಸಿಬಿಟ್ಟಿತ್ತು. ದೇಶದ ಆರು ಬೇರೆ ಬೇರೆ ಕಡೆಗಳಲ್ಲಿ ಆರು ಗಣ್ಯರ ಸಾವು. ತಿರುವನಂತಪುರ, ಭೂಪಾಲ, ಪುಣೆ, ಮಸ್ಸೂರಿ, ಬೆಂಗಳೂರು ಮತ್ತು ಸೂರತ್... ಹೀಗೆ ಆರೂ ಆರು ದಿಕ್ಕು! ಒಂದು ಮುಗಿಸುವ ಹೊತ್ತಿಗೆ ಇನ್ನೊಂದು! ಅಸಲಿನಲ್ಲಿ ನಾನೇ ಸಾಯುವಷ್ಟು ದಣಿದು ಹೋಗಿದ್ದೆ!!

ಎಂತಲೇ, ನಿನ್ನೆ ಬೆಳಕಾಗುವುದಕ್ಕೂ ಮೊದಲೇ ಈ ಕುಣಾಲ ಮೊಹಂತಿಯ ಫೋನು ಬಂದಾಗ ಏನೋ ಸಬೂಬು ಹೇಳಿ ಒಲ್ಲೆಂದುಬಿಟ್ಟೆ. ಮತ್ತೆ ಮತ್ತೆ ಅವನು ಕರೆಯತೊಡಗಿದಾಗ ಮೊಬೈಲನ್ನು ಸ್ವಿಚಾಫ್ ಮಾಡಿ ಸುಮ್ಮನಾದೆ. ಅವನು 'ಸಂಸ್ಕಾರ್ ರೈಟ್ಸ್'ನ ವೈಬ್‌ಸೈಟಿನಲ್ಲಿ ಲಭ್ಯವಿರುವ ಅಷ್ಟೂ ನಂಬರುಗಳಲ್ಲದೆ, ಗೂಗಲಿನಲ್ಲಿ ನನ್ನ ಕುರಿತು ಸಿಗುವ ಎಲ್ಲ ಮಾಹಿತಿಯನ್ನೂ ಹುಡುಕಿ ತಡಕಿ ನನ್ನೊಡನೆ ಮಾತು ಏರ್ಪಡಿಸಿಕೊಳ್ಳಲು ಹೊಂಚಿದ್ದಾನೆಂದು, ಬಳಿಕ ತಿಳಿದುಬಂತು. 'ಸರ್‌ಜೀ... ಒನ್ ಮಿಸ್ಟರ್ ಕುಣಾಲ್ ಮೊಹಂತಿ ಈಸ್ ಡೆಸ್ಪರೇಟ್ ಟು ರೀಚ್ ಯೂ...' ಎಂದು 'ಸಂಸ್ಕಾರ್ ರೈಟ್ಸ್'ನ ಸೆಕ್ರೆಟರಿ ದೀಕ್ಷಾ ನನ್ನ ಇನ್ನೊಂದು ನಂಬರಿಗೆ ಕರೆದು ಹೇಳಿದಾಗಲೂ, ನನಗೆ ಸಂಗತಿಯೇನೂ ವಿಶೇಷವೆನಿಸಿರಲಿಲ್ಲ. 'ನಾಟ್ ಟು ವರೀ... ಮತ್ತೆ ಫೋನ್ ಮಾಡಿದರೆ, ನಾನು ಮಾತಿಗೆ ಸಿಕ್ಕಿಲ್ಲ ಅಂದುಬಿಡು...' ಎಂದು ಮೊಬೈಲು ಬಡಿಚಿದ್ದೆ.

ಇಷ್ಟಾಗಿ, ವಿಧಿಯೆಂಬುದೇನು ನನ್ನ ಕೈಯಲ್ಲಿದೆಯೇ? ಏನೆಲ್ಲ ನಿಬಂಧನೆಗಳ ನಡುವೆಯೂ ಪರೀಕ್ಷಿತನನ್ನು ಹಾವು ಕಚ್ಚಿತಷ್ಟೆ? ಸಾವೇ ಹಾವಂತೆ ಬಂದೆರಗಿತಷ್ಟೆ? ಇನ್ನು ನಾನೂ ಹುಟ್ಟಾಕಟ್ಟಾ ಮನುಷ್ಯನೇ ತಾನೇ? ಹಣೆಬರಹವು ತಪ್ಪುತ್ತದೆಲ್ಲಿ?

ಕಡೆಗೆ, 'ಕೋವಲನ್, ನೀವು ಹೋಗಲೇಬೇಕು... ಡೆಲ್ಲಿಯಿಂದ ಫೋನು ಬಂದಿದೆ...' ಎಂದು ಗೃಹಸಚಿವಾಲಯದ ವಕ್ತಾರ ಹೇಳುವಾಗ ಒಪ್ಪಲಾಗದ ವಿಧಿಯೇ ಎದುರಿರಲಿಲ್ಲ. ಹಳೆಯ ಸಬೂಬುಗಳನ್ನೆಲ್ಲ ಒರೆಸಿ ಬಿಸಾಕಬಲ್ಲ ಹೊಸ ಸಬೂಬು ಹೇಳಿ ಒಪ್ಪಿಕೊಂಡೆ.